# ಸಕಲೇಶಪುರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವ ನ್ಯಾಯಾಲಯದಲ್ಲಿ

## ಸಿ.ಸಿ. ನಂ. 308/2025

| | | |
|---|---|---|
| ಸಾಕ್ಷಿದಾರರ ಹೆಸರು | ಎಂ ಜಗದೀಶ್ | **P.W-1** |
| ತಂದೆಯ / ಗಂಡನ ಹೆಸರು | ಮಹದೇವಪ್ಪ | **C.W-1** |
| ವಯಸ್ಸು | 53 ವರ್ಷ | |
| ಉದ್ಯೋಗ | ಪಿ ಐ ಚಾಮರಾಜನಗರ ನಗರ ಠಾಣೆ | |
| ವಾಸ ಸ್ಥಳ | ಚಾಮರಾಜನಗರ | ದಿನಾಂಕ 06-07-2026 |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ನಾನು ದಿಃ 23-08-2023 ರಿಂದ ದಿಃ 25-10-2025 ರವರೆಗೆ ನಾನು ಸಕಲೇಶಪುರ ನಗರ ಠಾಣೆಯಲ್ಲಿ ಪಿ.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 16-04-2025 ರಂದು ಬೆಳಗ್ಗೆ 5.30 ಗಂಟೆಗೆ ಬಾತ್ಮಿದಾರರಿಂದ ನನಗೆ ಬಂದ ಖಚಿತ ಮಾಹಿತಿಯ ಮೇರೆಗೆ ಚಾಸಾ 3 ರಿಂದ 7 ರವರೊಂದಿಗೆ ಸಕಲೇಶಪುರ ನಗರ ಠಾಣಯ ಸರಹದ್ದಿನ ಮಳಲಿ ಗ್ರಾಮದ ಬಳಿ ಹರಿಯುತ್ತಿದ್ದ ಹೇಮಾವತಿ ನದಿಗೆ ನಿರ್ಮಿಸಿರುವ ಹೊಸ ಸೇತುವೆಯ ಕೆಳಭಾಗದಲ್ಲಿ ಆರೋಪಿ ನದಿಯಿಂದ ಸಿಮೆಂಟ್ ಚೀಲದಲ್ಲಿ ಮರಳನ್ನು ಕಳ್ಳತನದಿಂದ ತುಂಬಿಸಿ ಕೆ.ಎ 19 ಇ ಎಸ್ 7692 ನಂಬರಿನ ಮತ್ತು ಕೆ ಎ 20 ಡಬ್ಲು 5004 ದ್ವಿ ಚಕ್ರ ವಾಹನದಲ್ಲಿ ಸರ್ಕಾರದ ಯಾವುದೇ ಪರವಾನಗೆ ಪಡೆಯದೇ ಮರಳನ್ನು ಪ್ಲಾಸ್ಟಿಕ್ ಚೀಲದಲ್ಲಿ ತುಂಬಿಸಿ ಅಕ್ರಮವಾಗಿ ಸಾಗಾಟ ಮಾಡುತ್ತಿದುದು ಕಂಡುಬಂದಿರುತ್ತದೆ. ಈ ಬಗ್ಗೆ ನಾನು ವರದಿ ತಯಾರಿಸಿ ಚಾಸಾ 2 ರವರಿಗೆ ನೀಡಿದ್ದು ನಂತರ ಕೃತ್ಯ ನಡೆದ ಸ್ಥಳದಲ್ಲಿ ಸ್ಥಳ ಪಂಚನಾಮೆಯನ್ನು ಚಾಸಾ 3 ರಿಂದ 7 ರವರ ಸಮಕ್ಷಮ ಬೆಳಗ್ಗೆ 6.45 ರಿಂದ 7.15 ರವರೆಗೆ ಜರುಗಿಸಿರುತ್ತೇನೆ. ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ. 1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 1 ಎ ಎಂದು ಗುರುತಿಸಲಾಯಿತು. ಮಹಜರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ. 2 ಎಂದು,

ಸಾಕ್ಷಿಯ ಸಹಿಯನ್ನು ನಿ.ಪಿ. 2 ಎ ಎಂದು ಗುರುತಿಸಲಾಯಿತು. ಸ್ವತ್ತಿನ ಪಟ್ಟಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ. 3 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 3 ಎ ಎಂದು ಗುರುತಿಸಲಾಯಿತು. ಪಂಚರಿಗೆ ನೀಡಿದ ನೋಟಿಸನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ. 4 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 4 ಎ ಎಂದು ಗುರುತಿಸಲಾಯಿತು. ದಿಃ 19-05-2025 ರಂದು ಪಿ ಡಬ್ಲು ಡಿ ಇಲಾಖೆಯಿಂದ ನೀಡಿದ ವರದಿಯನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿರುತ್ತೇನೆ. ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ. 5 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 5 ಎ ಎಂದು ಗುರುತಿಸಲಾಯಿತು. ಚಾಸಾ 3 ರಿಂದ 7 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನ್ಯಾಯಾಲಯ ಆದೇಶದಂತೆ ದಿಃ 02-05-2025 ರಂದು ಕೆ ಎ 19 ಇ ಎಸ್ 7692 ವಾಹನವನ್ನು ಚಾಸಾ 8 ಮತ್ತು 9 ರವರ ಸಮಕ್ಷಮ ಸಂಜೆ 6.15 ರಿಂದ 6.45 ರ ವರೆಗೆ ಮಹಜರ್ ಕ್ರಮ ಜರುಗಿಸಿ ವಾಹನದ ಮಾಲೀಕರಿಗೆ ಬಿಡುಗಡೆ ಮಾಡಿರುತ್ತೇನೆ. ಬಿಡುಗಡೆ ಮಹಜರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ. 6 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 6 ಎ ಎಂದು ಗುರುತಿಸಲಾಯಿತು. ಪಂಚರಿಗೆ ನೀಡಿದ ನೋಟೀಸನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ. 7 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 7 ಎ ಎಂದು ಗುರುತಿಸಲಾಯಿತು.

ದಿಃ 24-05-2025 ರಂದು ಕೆ ಎ 20 ಡಬ್ಲು 5004 ನಂಬರಿನ ದ್ವಿ ಚಕ್ರ ವಾಹನವನ್ನು ಪಂಚರಾದ ಚಾಸಾ 10 ಮತ್ತು 11 ರವರ ಸಮಕ್ಷಮ ಬೆಳಗ್ಗೆ 11.00 ರಿಂದ 11.45 ರವರೆಗೆ ಮಹಜರ್ ಕ್ರಮ ಜರುಗಿಸಿ ಬಿಡುಗಡೆ ಮಾಡಿರುತ್ತೇನೆ. ಸದರಿ ಮಹಜರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ. 8 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 8 ಎ ಎಂದು ಗುರುತಿಸಲಾಯಿತು. ಪಂಚರಿಗೆ ನೀಡಿದ ನೋಟೀಸನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ. 9 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 9 ಎ ಎಂದು ಗುರುತಿಸಲಾಯಿತು. ಮಹಜರ್ ಕಾಲದಲ್ಲಿ ಛಾಯಾಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿ.ಪಿ. 10 ರಿಂದ ನಿ.ಪಿ 19 ಎಂದು ಗುರುತಿಸಲಾಯಿತು. ಛಾಯಾಚಿತ್ರಗಳನ್ನು ತೆಗೆದ ಬಗ್ಗೆ ದೃಡೀಕರಣ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ. 20 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 20 ಎ ಎಂದು ಗುರುತಿಸಲಾಯಿತು. ಆರೋಪಿತರನ್ನು ನ್ಯಾಯಾಲಯದ ಮುಂದೆ ನೋಡಿ ಗುರುತಿಸಿರುತ್ತೇನೆ.

**ಪಾಟೀ ಸವಾಲುಃ 1 ಮತ್ತು 3ನೇ ಆರೋಪಿತರ ಪರ ಶ್ರೀಮತಿ ಎಂ.ಎ ವಕೀಲರಿಂದ**

ನಾನು ಈ ಪ್ರಕರಣದ ಬಗ್ಗೆ ಮಾಹಿತಿ ಬಂದ ಕೂಡಲೇ ಠಾಣೆಗೆ ಹೋಗಿ ವರದಿ ನೀಡಿ ನಂತರ ತಕ್ಷೀರು ಸ್ಥಳಕ್ಕೆ ಹೋಗಿರುತ್ತೇನೆ. ಬೆಳಗ್ಗೆ 6.00 ಗಂಟೆಗೆ ನಾನು ಠಾಣೆಗೆ ಹೋಗಿರುತ್ತೇನೆ. ಕೃತ್ಯ ಸ್ಥಳದಿಂದ ನಮ್ಮ ಠಾಣೆಗೆ ಸುಮಾರು 5 ಕಿ ಮಿ ಅಂತರವಿರುತ್ತದೆ. 6.00 ಗಂಟೆಗೆ ಠಾಣೆಯಲ್ಲಿ ವರದಿ ನೀಡಿ 10 ನಿಮಿಷಗಳ ನಂತರ ತಕ್ಷೀರು ಸ್ಥಳಕ್ಕೆ ಹೊರಟಿರುತ್ತೇನೆ. ಬಾತ್ಮಿದಾರರ ಮಾಹಿತಿಯ ಮೇರೆಗೆ ನಾನು ಮತ್ತು ಸಿಬ್ಬಂದಿಗಳು ತಕ್ಷೀರು ಸ್ಥಳಕ್ಕೆ ಹೋಗಿರುತ್ತೇವೆ. ತಕ್ಷೀರು ಸ್ಥಳದ ಸಮೀಪದಲ್ಲಿ ಪಂಚರು ನಮಗೆ ಸಿಕ್ಕಿರುತ್ತಾರೆ, ಅವರಿಗೆ ಪ್ರಕರಣದ ಮಾಹಿತಿ ನೀಡಿ, ನೋಟೀಸು ನೀಡಿ ಮಹಜರ್ ಗೆ ಕರೆದುಕೊಂಡು ಹೋಗಿರುತ್ತೇನೆ. ತಕ್ಷೀರು ಸ್ಥಳಕ್ಕೆ ಹೋಗುವ ಸಮಯದಲ್ಲಿ ನಾನು ಐ ಒ ಕಿಟ್ ತೆಗೆದುಕೊಂಡು ಹೋಗಿರುವುದಿಲ್ಲ. ಬೆಳಗ್ಗೆ ಸುಮಾರು 6.30 ರ ಸಮಯದಲ್ಲಿ ಪಂಚರಿಗೆ ನೋಟೀಸು ನೀಡಿರುತ್ತೇನೆ. ಪ್ರಥಮ ವರ್ತಮಾನ ವರದಿಯ ಮೊಕದ್ದಮೆ ಸಂಖ್ಯೆಯನ್ನು ನೋಟೀಸ್ ನಲ್ಲಿ ನಮೂದು ಮಾಡಿರುತ್ತೇನೆ. ಠಾಣಾ ಎಸ್ ಹೆಚ್ ಒ ರವರು ಮೊಕದ್ದಮೆ ಸಂಖ್ಯೆಯನ್ನು ತಿಳಿಸಿರುತ್ತಾರೆ. ತಕ್ಷೀರು ಸ್ಥಳದ ಸುತ್ತಾಮುತ್ತಾ ಗದ್ದೆಗಳು ಇರುತ್ತವೆ ಎಂದರೆ ಸರಿ. ತಕ್ಷೀರು ಸ್ಥಳದಲ್ಲಿ ಜನರು ಸಾಮಾನ್ಯವಾಗಿ ಓಡಾಡುತ್ತಿರುತ್ತಾರೆ ಎಂದರೆ ಸಾಕ್ಷಿಯು ಬೆಳಗಿನ ಜಾವ ಆಗಿದ್ದರಿಂದ ಜನರು ಓಡಾಡುತ್ತಿರಲಿಲ್ಲ ಎಂದು ನುಡಿಯುತ್ತಾರೆ. ತಕ್ಷೀರು ಸ್ಥಳದ ಚಕ್ಕುಬಂದಿಯನ್ನು ಪಂಚರು ತಿಳಿಸಿರುತ್ತಾರೆ. ಸುಮಾರು 3 ಚೀಲದಲ್ಲಿ ಆರೋಪಿತರು ಮರಳನ್ನು ತುಂಬಿಸಿದ್ದರು. ಮಹಜರ್ ನಲ್ಲಿ 3 ಚೀಲ ಮರಳು ಇದ್ದ ಬಗ್ಗೆ ನಮೂದು ಮಾಡಿರುತ್ತೇನೆ. ಛಾಯಾಚಿತ್ರಗಳನ್ನು ನಮ್ಮ ಸಿಬ್ಬಂದಿ ತೆಗೆದಿರುತ್ತಾರೆ. ಯಾರು ತೆಗೆದಿರುತ್ತಾರೆ ಎಂದು ನನಗೆ ಈಗ ನೆನಪಿಲ್ಲ. ಮರಳು ತುಂಬಲು ಬಳಸುವ ಸಲಕರಣೆಗಳು ಸ್ಥಳದಲ್ಲಿ ಇರಲಿಲ್ಲ, ಮರಳು ತುಂಬಿದ ಗೋಣಿ ಚೀಲಗಳನ್ನು ಮಾತ್ರ ಅಮಾನತ್ತುಪಡಿಸಿಕೊಂಡಿರುತ್ತೇವೆ. ತಕ್ಷೀರು ಸ್ಥಳದಲ್ಲಿದ್ದ ವಾಹನಗಳ ಮಾಲೀಕರು ಯಾರು ಎಂದು ದಾಖಲಾತಿಯನ್ನು ಪರಿಶೀಲನೆ ಮಾಡಿರುತ್ತೇನೆ. ನಮ್ಮ ಸಿಬ್ಬಂದಿಗಳನ್ನು ಹೊರತುಪಡಿಸಿ ಮಹಜರ್ ಕಾಲದಲ್ಲಿ ಬೇರೆ ಯಾವುದೇ ಅಧಿಕಾರಿಗಳು ಹಾಜರಿರಲಿಲ್ಲ. ದಿಃ 19-05-2025 ರಂದು ಮರಳನ್ನು ಪಿ ಡಬ್ಲು ಡಿ ಯವರ ವಶಕ್ಕೆ ನೀಡಿರುತ್ತೇವೆ. ಮರಳನ್ನು ಪಿ ಡಬ್ಲು ಡಿ ಇಲಾಖೆಗೆ ನೀಡುವ ಸಮಯದಲ್ಲಿ ಪ್ರತ್ಯೇಕ ಮಹಜರ್ ಮಾಡಿರುವುದಿಲ್ಲ, ಅದೇ ರೀತಿ ಆ ಬಗ್ಗೆ ಛಾಯಾಚಿತ್ರ ತೆಗೆದಿರುವುದಿಲ್ಲ. ಠಾಣಾ ಎಸ್ ಹೆಚ್ ಒ ರವರನ್ನು ಈ

ಪ್ರಕರಣದಲ್ಲಿ ಸಾಕ್ಷಿದಾರರನ್ನಾಗಿ ಮಾಡಿರುತ್ತೇನೆ. ಆರೋಪಿತರು ಕೃತ್ಯ ಸ್ಥಳದಿಂದ ಓಡಿ ಹೋಗುವ ಸಮಯದಲ್ಲಿ ಛಾಯಾಚಿತ್ರವನ್ನು ತೆಗೆಸಿರುವುದಿಲ್ಲ. ಮಳೆಗಾಲದಲ್ಲಿ ಗದ್ದೆ ಬದಿಯಲ್ಲಿ ಗದ್ದೆಯಿಂದ ನೀರು ಹರಿಯದಂತೆ ಮರಳಿನ ಚೀಲಗಳನ್ನು ಇಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಕೃತ್ಯ ಸ್ಥಳಕ್ಕೆ ಹೋಗಿರುವುದಿಲ್ಲ ಮತ್ತು ಯಾವುದೇ ಛಾಯಾಚಿತ್ರಗಳನ್ನು ಕೃತ್ಯ ಸ್ಥಳದಲ್ಲಿ ತೆಗೆಸಿರುವುದಿಲ್ಲ ಎಂದರೆ ಸರಿಯಲ್ಲ. ಪಿ.ಡಬ್ಲು.ಡಿ ಇಲಾಖೆಯಿಂದ ವರದಿಯನ್ನು ಈ ಪ್ರಕರಣಕ್ಕೋಸ್ಕರ ಸೃಷ್ಟಿ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ಪಂಚರಿಗೆ ನೋಟೀಸು ನೀಡಿ ಸ್ಥಳಕ್ಕೆ ಕರೆದುಕೊಂಡು ಹೋಗಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕೃತ್ಯ ಸ್ಥಳದ ಪಹಣಿ ಪತ್ರವನ್ನು ಹಾಜರುಪಡಿಸಬಹುದಿತ್ತು ಎಂದರೆ ಸಾಕ್ಷಿಯು ತಕ್ಷೀರು ಸ್ಥಳವು ಹೇಮಾವತಿ ನದಿ ದಡ ಆಗಿರುವುದರಿಂದ ಸರ್ಕಾರಿ ಜಮೀನಾಗಿರುತ್ತದೆ ಎಂದು ನುಡಿಯುತ್ತಾರೆ. ಪಂಚರ ಸಹಿಯನ್ನು ಠಾಣೆಯಲ್ಲಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಕೃತ್ಯ ಸ್ಥಳ ಮಹಜರನ್ನು ಠಾಣೆಯಲ್ಲಿ ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಹಾಜರುಪಡಿಸಿರು ವಾಹನದ ಮಾಲೀಕರು ಅವರ ಜಮೀನಿಗೆ ಹೋಗುತ್ತಿರುವಾಗ ಅವರ ವಾಹನಗಳನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ನಾನು ಹಾಜರುಪಡಿಸಿರುವ ಛಾಯಾಚಿತ್ರಗಳು ನಾನು ಹೇಳಿರುವ ದಿನದ ಛಾಯಾಚಿತ್ರಗಳಲ್ಲ ಎಂದರೆ ಸರಿಯಲ್ಲ. ಆರೋಪಿತರ ವಿರುದ್ಧ ಯಾವುದೇ ಆರೋಪ ಸಾಬೀತಾಗದೇ ಇದ್ದರೂ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ಮತ್ತು 4ನೇ ಆರೋಪಿತರ ಪರ ಶ್ರೀ ಪಿ ಎನ್ ವಕೀಲರಿಂದ**

ಬಾತ್ಮಿದಾರರಿಂದ ಮಾಹಿತಿ ಬಂದ ನಂತರ ನಾನು ಠಾಣಾ ಎಸ್ ಹೆಚ್ ಒ ರವರಿಗೆ ವರದಿ ನೀಡಿ ನಂತರ ತಕ್ಷೀರು ಸ್ಥಳಕ್ಕೆ ಹೋಗಿರುತ್ತೇನೆ. ನಾವು ಸದರಿ ದಿನ ತಕ್ಷೀರು ಸ್ಥಳಕ್ಕೆ 6.30 ಗಂಟೆಗೆ ಹೋಗಿರುತ್ತೇವೆ. ದೂರು ನೀಡಿದ ತಕ್ಷಣ ಠಾಣಾ ಎಸ್ ಹೆಚ್ ಒ ರವರು ಪ್ರಥಮ ವರ್ತಮಾನ ವರದಿ ತಯಾರು ಮಾಡಿರುತ್ತಾರೆ. ಮಳಲಿ ಕಡೆಯಿಂದ ಮಂಗಳೂರು ಕಡೆಗೆ ಹೋಗುವ ಹೇಮಾವತಿ ಹೊಸ ಬ್ರಿಡ್ಜ್ ನ ಎಡಭಾಗದಲ್ಲಿ ಮರಳನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ಸದರಿ

ಬ್ರಿಡ್ಜ್ ನ ನಂಬರನ್ನು ಮಹಜರ್ ನಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಬ್ರಿಡ್ಜ್ ನಿಂದ ತಕ್ಷೀರು ಸ್ಥಳಕ್ಕೆ ಇಳಿದು ಹೋಗಲು ರಸ್ತೆ ಇರುತ್ತದೆ. ನಿಪಿ 10 ಮತ್ತು 11 ರಲ್ಲಿ ಯಾವುದೇ ರಸ್ತೆ ಕಾಣುತ್ತಿಲ್ಲ ಎಂದರೆ ಸರಿಯಲ್ಲ. ಎರಡು ದ್ವಿ ಚಕ್ರ ವಾಹನಗಳಲ್ಲಿ ತಲಾ ಮೂರು ಚೀಲ ಮರಳು ತುಂಬಿದ್ದರು. ಈ ಬಗ್ಗೆ ಮಹಜರ್ ನಲ್ಲಿ ನಮೂದು ಮಾಡಿರುತ್ತೇನೆ. ತಕ್ಷೀರು ಸ್ಥಳದಲ್ಲಿ ನಮ್ಮನ್ನು ನೋಡಿ ಮೂರು ಜನ ಆರೋಪಿತರು ಓಡಿ ಹೋಗಿರುತ್ತಾರೆ, ಒಬ್ಬ ಆರೋಪಿ ಮಾತ್ರ ನನಗೆ ಸಿಕ್ಕಿರುತ್ತಾರೆ. 4ನೇ ಆರೋಪಿಯನ್ನು ನಾವು ವಶಕ್ಕೆ ಪಡೆದಿರುತ್ತೇವೆ. 4ನೇ ಆರೋಪಿಗೆ ಕಣ್ಣು ಕಾಣುವುದಿಲ್ಲ ಎಂದರೆ ಸಾಕ್ಷಿಯು 4ನೇ ಆರೋಪಿಯು ಕಣ್ಣು ಕಾಣದಿದ್ದರೂ ಕೆಲಸ ಮಾಡುತ್ತಾರೆ ಎಂದು ನುಡಿಯುತ್ತಾರೆ. 4ನೇ ಆರೋಪಿಯು ಸದರಿ ದಿನ ಮರಳನ್ನು ಚೀಲಕ್ಕೆ ತುಂಬುತ್ತಿದ್ದರು. 4ನೇ ಆರೋಪಿಯು ಮರಳನ್ನು ಚೀಲಕ್ಕೆ ತುಂಬುತ್ತಿರುವುದನ್ನು ನಾನು ನೋಡಿರುತ್ತೇನೆ. ಒಟ್ಟು ಎಷ್ಟು ಚೀಲಕ್ಕೆ 4ನೇ ಆರೋಪಿ ಮರಳು ತುಂಬಿರುತ್ತಾರೆ ಎಂದು ನನಗೆ ಈಗ ಹೇಳಲು ಸಾಧ್ಯವಿಲ್ಲ. ತಕ್ಷೀರು ಸ್ಥಳದಲ್ಲಿ ದ್ವಿ ಚಕ್ರ ವಾಹನದಲ್ಲಿ ಮರಳು ತುಂಬಿದ ಮೂರು ಚೀಲಗಳು ಇದ್ದವು. ಎರಡು ವಾಹನಗಳಲ್ಲಿ ತಲಾ ಮೂರು ಚೀಲ ಮರಳು ಇರಲಿಲ್ಲ ಎಂದರೆ ಸರಿಯಲ್ಲ. ಮರಳು ಚೀಲಗಳನ್ನು ನಾವೇ ಆರೋಪಿತರ ದ್ವಿ ಚಕ್ರ ವಾಹನದಲ್ಲಿ ಇಟ್ಟು ಸುಳ್ಳು ಪ್ರಕರಣವನ್ನು ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಇದೇ ಸ್ಥಳದಲ್ಲಿ ಆರೋಪಿತರ ವಿರುದ್ಧ ಮರಳು ಸಾಗಾಟದ ಬಗ್ಗೆ ಇನ್ನೊಂದು ಪ್ರಕರಣವನ್ನು ದಾಖಲು ಮಾಡಲಾಗಿರುತ್ತದೆ ಎಂದರೆ ಸರಿ. ಇನ್ನೊಂದು ಪ್ರಕರಣದಲ್ಲಿ ಹೇಳಿರುವ ವಾಹನ ಮತ್ತು ಅದೇ ಮರಳು ಚೀಲವನ್ನು ಇಟ್ಟು ಈ ಪ್ರಕರಣವನ್ನು ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಮರಳು ತುಂಬಿದ ಚೀಲಗಳನ್ನು ಠಾಣೆಯಲ್ಲಿ ಎಸ್ ಹೆಚ್ ಒ ರವರ ಮುಂದೆ ಹಾಜರುಪಡಿಸಿರುತ್ತೇನೆ. ಮರಳು ತುಂಬಿದ ಚೀಲಗಳು ಈ ದಿನ ನ್ಯಾಯಾಲಯದಲ್ಲಿ ಇರುವುದಿಲ್ಲ ಎಂದರೆ ಸರಿ. ಸದರಿ ಮರಳು ತುಂಬಿದ ಚೀಲಗಳು ಯಾವ ಕಂಪನಿಗೆ ಸೇರಿದ ಸಿಮೆಂಟ್ ಚೀಲಗಳು ಎಂದು ನನಗೆ ಈಗ ನೆನಪಿಲ್ಲ. ಮಹಜರ್ ನಲ್ಲಿ ಚಕ್ಕುಬಂದಿಯಲ್ಲಿ ಹೇಮಾವತಿ ಹೊಳೆಯ ಬಗ್ಗೆ ಮಾತ್ರ ನಮೂದು ಮಾಡಿರುತ್ತೇನೆ ಎಂದರೆ ಸಾಕ್ಷಿಯು ಸ್ಥಳದ ಚಕ್ಕುಬಂದಿಯನ್ನೇ ಮಹಜರ್ ನಲ್ಲಿ ನಮೂದು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿತರು ಮರಳನ್ನು ತುಂಬಿಸಿದ ಬಗ್ಗೆ ಯಾವುದೇ ಸಲಕರಣೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ಆರೋಪಿತರು ಸಲಕರಣೆಗಳೊಂದಿಗೆ ಓಡಿ

ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿತರು ಮರಳು ಕಳ್ಳತನ ಮಾಡಿ ಸಾಗಾಟ ಮಾಡಿರುತ್ತಾರೆ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಪಿ 2 ಮಹಜರ್ ನಲ್ಲಿ ಎಂತಹ ವಾಹನ ಎಂದು ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 2 ಮಹಜರನ್ನು ನನ್ನ ಹೇಳಿಕೆಯ ಮೇರೆಗೆ ಸಿಬ್ಬಂದಿಗಳು ಬರೆದಿರುತ್ತಾರೆ. ನಿಪಿ 2 ಮಹಜರ್ ನ ಬರವಣಿಗೆಗೂ ಸಾಕ್ಷಿದಾರರ ಸಹಿಯ ಬಳಿ ಇರುವ ಬರವಣಿಗೆಗೂ ವ್ಯತ್ಯಾಸ ಇರುತ್ತದೆ ಎಂದರೆ ಸರಿಯಲ್ಲ. ನಿಪಿ 2 ಮಹಜರನ್ನು ಠಾಣೆಯಲ್ಲಿ ತಯಾರು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ನಮ್ಮ ಠಾಣೆಯ ಹಿರಿಯ ಅಧಿಕಾರಿಯಾಗಿರುವುದರಿಂದ ನನ್ನ ಸಿಬ್ಬಂದಿಗಳನ್ನು ಬಳಸಿ ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ಪ್ರಕರಣಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮಹಜರ್ ನಲ್ಲಿ ಸಮಯವನ್ನು ತಿದ್ದುಪಡಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ವಾಹನಗಳನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ ಎಂದು ಅಮಾನತ್ತು ಮಹಜರ್ ಅನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮಹಜರ್ ನಲ್ಲಿ 6 ಮರಳಿನ ಮೂಟೆಗಳು ಇರುವ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸಇ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ , ಸಕಲೇಶಪುರ